D.El.Ed

Question Paper














Code No.: 444-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು-560003

KARNATAKA SCHOOL EXAMINATION AND ASSESSMENT BOARD
Malleshwaram, Bengaluru-560003

ದ್ವಿತೀಯ ವರ್ಷದ ಡಿ.ಎಲ್.ಇಡಿ. ಪೂರಕ ಪರೀಕ್ಷೆ, ಡಿಸೆಂಬರ್, 2022

Second Year D.El.Ed. Supplementary Examination, December, 2022

Subject / ವಿಷಯ	:	**Facilitating Learning (H.P.S)** **First Language - KANNADA** ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ) ಪ್ರಥಮ ಭಾಷೆ - ಕನ್ನಡ
Date of Exam. / ಪರೀಕ್ಷೆಯ ದಿನಾಂಕ	:	12.12. 2022
Maximum Marks / ಗರಿಷ್ಠ ಅಂಕಗಳು	:	60
Duration of Exam / ಪರೀಕ್ಷೆ ಅವಧಿ	:	3 hours / 3 ಗಂಟೆಗಳು
Time / ಸಮಯ	:	2.00 PM to 5.00 PM

ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates :*

1. ಅಭ್ಯರ್ಥಿಗಳು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ-ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸಷ್ಟವಾಗಿ ಬರೆಯಿರಿ.
   Candidates should write their Register Number on the Answer Booklet as printed in their admission ticket.
2. ಅಭ್ಯರ್ಥಿಗಳು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ-ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.
   Candidates should write their Main Answer Booklet Number on the additional answer sheets in the space provided.
3. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This Question Paper has been sealed by reverse jacket. You have to cut on the right side to open the Question Paper at the time of commencement of the examination. Check whether all the pages of the Question Paper are intact.
4. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ-ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.
5. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidate found to be indulging in malpractice during examination and violating examination instructions, action will be taken against such candidate as per the examination rules and his/her Answer Booklet will not be considered for evaluation.
6. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.
   Use black / blue ball point pen only to write the answers.

institutes.aglasem.com
aglasem.com

(ಕನ್ನಡ ಮಾಧ್ಯಮ)

ಸೂಚನೆಗಳು : i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ, ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು ಮೂರು ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

ಭಾಗ – I

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯು ಕಡ್ಡಾಯ. $1 \times 10 = 10$

1. ಕಾವ್ಯದ ಪ್ರಕಾರಗಳು ಯಾವುವೆಂದರೆ,

i) ಹಾಯ್ ಕು ii) ಕವನ

iii) ಶಿಶುಗೀತೆ iv) ಚುಟುಕು

(A) i ಮತ್ತು ii ಸರಿ (B) iii ಮತ್ತು iv ಸರಿ

(C) i, iii ಮತ್ತು iv ಸರಿ (D) ಈ ಮೇಲಿನ ಎಲ್ಲವೂ

2. ಭಾಷಾ ಕಲಿಕೆಯ ಮೌಲ್ಯಮಾಪನದ ಉಪಯುಕ್ತತೆ ಈ ಅಂಶಗಳನ್ನು ಅವಲಂಬಿಸಿದೆ.

(i) ಸೂಕ್ತವಾದ ತಂತ್ರಗಳು ಮತ್ತು ಸಾಧನಗಳ ಆಯ್ಕೆ

(ii) ಸ್ವಾವಲೋಕನವನ್ನು ಅನುಕೂಲಿಸುವ ಹಿಮ್ಮಾಹಿತಿ

(iii) ಗುಣಮಟ್ಟಕ್ಕಿಂತ ಅಂಕಗಳ ಪ್ರಮಾಣಕ್ಕೆ ಪ್ರಾಧಾನ್ಯತೆ

(iv) ಉದ್ದೇಶಗಳ ಸ್ಪಷ್ಟತೆ

(A) i ಮತ್ತು iii ಸರಿ (B) ii ಮತ್ತು iv ಸರಿ

(C) i, ii ಮತ್ತು iv ಸರಿ (D) ಈ ಮೇಲಿನ ಎಲ್ಲವೂ

3. ವ್ಯಾಕರಣ ಕಲಿಕಾ ಪ್ರಕ್ರಿಯೆಯು ಒಳಗೊಂಡಿರುವ ಅಂಶಗಳ ಸರಿಯಾದ ಅನುಕ್ರಮಣಿಕೆ ಹೀಗಿದೆ:

(A) ಬಳಕೆಯ ನಿಯಮಗಳ ಸಾಮಾನ್ಯೀಕರಣ, ಮುಂದುವರಿದ ಬಳಕೆ, ಭಾಷೆಯ ಬಳಕೆ, ಬಳಕೆ ಕುರಿತಾದ ಅರಿವು

(B) ಭಾಷೆಯ ಬಳಕೆ, ಬಳಕೆ ಕುರಿತಾದ ಅರಿವು, ಬಳಕೆಯ ನಿಯಮಗಳ ಸಾಮಾನ್ಯೀಕರಣ, ಮುಂದುವರಿದ ಬಳಕೆ

(C) ಬಳಕೆಯ ಕುರಿತಾದ ಅರಿವು ಮುಂದುವರಿದ ಬಳಕೆ ಭಾಷೆಯ ಬಳಕೆ, ಬಳಕೆಯ ನಿಯಮಗಳ ಸಾಮಾನ್ಯೀಕರಣ

(D) ಮುಂದುವರಿದ ಬಳಕೆ, ಬಳಕೆ ಕುರಿತಾದ ಅರಿವು, ಬಳಕೆಯ ನಿಯಮಗಳ ಸಾಮಾನ್ಯೀಕರಣ, ಭಾಷೆಯ ಬಳಕೆ.

institutes.aglasem.com

aglasem.com

4. ಆರಂಭಿಕ ಹಂತಗಳಲ್ಲಿ ಕಲಿಕಾ ಮಾಧ್ಯಮ ಮಗುವಿನ ಮಾತೃಭಾಷೆಯಾಗಿರುವುದು ಅತ್ಯಂತ ಅಪೇಕ್ಷಣೀಯ. ಏಕೆಂದರೆ,

(i) ಇತರ ವಿಷಯಗಳ ಕಲಿಕೆ ಸುಗಮವಾಗುತ್ತದೆ

(ii) ಅನಗತ್ಯ ವಿಷಯಗಳಲ್ಲಿ ಆಸಕ್ತಿ ಹೆಚ್ಚುತ್ತದೆ

(iii) ಕಲಿಯುವ ಉತ್ಸಾಹ ಇಮ್ಮಡಿಗೊಳ್ಳುತ್ತದೆ

(iv) ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ

(A) i, iii ಮತ್ತು iv ಸರಿ

(B) ii, iii ಮತ್ತು iv ಸರಿ

(C) i, ii ಮತ್ತು iii ಸರಿ

(D) i, ii ಮತ್ತು iv ಸರಿ

5. ಬಹುಭಾಷಾ ಪ್ರೌಢಿಮೆ ಮತ್ತು ಶೈಕ್ಷಣಿಕ ಸಾಧನೆಗಳ ನಡುವೆ _____ ಸಹ ಸಂಬಂಧವಿದೆ.

(A) ಋಣಾತ್ಮಕ

(B) ಕಠಿಣಾತ್ಮಕ

(C) ಧನಾತ್ಮಕ

(D) ನಕಾರಾತ್ಮಕ

6. ತರಗತಿಯಲ್ಲಿ ಭಾಷೆಯ ಕಲಿಕೆ ಪರಿಣಾಮಕಾರಿಯನ್ನಾಗಿಸಲು ಈ ಕೆಳಗಿನವುಗಳಲ್ಲಿ ಯಾವುದು ಸೂಕ್ತ?

(A) ಎಲ್ಲವನ್ನೂ ಶಿಕ್ಷಕರೇ ಹೇಳುವುದು.

(B) ಕಲಿಕಾ ಅನುಭವಗಳು ನೈಜವಾಗಿರುವುದು.

(C) ಕಂಠಪಾಠವನ್ನು ಉತ್ತೇಜಿಸುವುದು.

(D) ಬರೆದಿದ್ದನ್ನೇ ಪುನಃ ಪುನಃ ಬರೆಸುವುದು.

7. ವಿದ್ಯಾರ್ಥಿಗಳಲ್ಲಿ ಮೌಖಿಕ ಅಭಿವ್ಯಕ್ತಿಯನ್ನು ಬೆಳೆಸಲು ನೀವು ನಡೆಸಲಿಚ್ಛಿಸುವ ಚಟುವಟಿಕೆ

(A) ಟಿ.ವಿ. ಕಾರ್ಯಕ್ರಮಗಳ ಬಗ್ಗೆ ಸ್ನೇಹಿತರೊಂದಿಗೆ ಚರ್ಚಿಸುವುದು.

(B) ಚಟುವಟಿಕೆಗೆ ಸಂಬಂಧಿಸಿದಂತೆ ಸೂಚನೆಗಳನ್ನು ಬರೆದುಕೊಳ್ಳುವುದು.

(C) ನಾಟಕಗಳನ್ನು ಸ್ಪಷ್ಟವಾಗಿ ಪುಸ್ತಕದಲ್ಲಿ ಬರೆಯುವುದು.

(D) ಪಠ್ಯ ಪುಸ್ತಕದಲ್ಲಿ ನೀಡಿದ ಅಭ್ಯಾಸ ಚಟುವಟಿಕೆಗಳಿಗೆ ಲಿಖಿತ ರೂಪದಲ್ಲಿ ಉತ್ತರಿಸುವುದು.

8. "ನಿನ್ನ ಕೈಯಾರೆ ನಿನ್ನನ್ನೇ ಮೂರ್ಖತನಕ್ಕೆ ಅರ್ಪಿಸಿಕೊಳ್ಳದಿರಲು ನಿನಗಿರುವ ಎಲ್ಲ ಕೆಲಸಗಳ ನಡುವೆ ಓದುವುದಕ್ಕೆ ಸಮಯ ಕೊಡು" – ಹೀಗೆಂದವರು

(A) ಪಾಲೋ ಕೋಯೆಲ್ಹೊ

(B) ಕನ್‌ಫ್ಯೂಷಿಯಸ್

(C) ರಿಚರ್ಡ್ ಕರ್ನ್

(D) ಇ. ಎಮ್. ಫಾಸ್ಟರ್

institutes.aglasem.com
aglasem.com

9. ಬರವಣಿಗೆಯ ಮೂಲಕ ಕಲಿತದ್ದನ್ನು ಸ್ಪಷ್ಟಪಡಿಸಿಕೊಳ್ಳುವ ಉದ್ದೇಶವನ್ನು ಸಾಧಿಸಲು ಸೂಕ್ತವಾದ ಚಟುವಟಿಕೆ ಎಂದರೆ,

(A) ಸಾರಾಂಶಿಸುವುದು
(B) ಪುಸ್ತಕವನ್ನು ವಿಮರ್ಶಿಸುವುದು
(C) ಕವನವನ್ನು ರಚಿಸುವುದು
(D) ಲೇಖನವನ್ನು ವಿಮರ್ಶಿಸುವುದು

10. ಒಳ್ಳೆಯ ಓದುಗರು

(i) ಸ್ವ ಪ್ರತಿಷ್ಠೆಯುಳ್ಳವರಾಗಿರುತ್ತಾರೆ.
(ii) ನಮ್ಯರಾಗಿರುತ್ತಾರೆ.
(iii) ಸರಾಗವಾಗಿ ಓದುತ್ತಾರೆ.
(iv) ವಿವೇಚನೆ ಇಲ್ಲದವರಾಗಿರುತ್ತಾರೆ.

(A) i ಮತ್ತು ii ಸರಿ
(B) i ಮತ್ತು iv ಸರಿ
(C) ii ಮತ್ತು iii ಸರಿ
(D) ii ಮತ್ತು iv ಸರಿ

ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ. **2 × 5 = 10**

11. ನಿರೂಪಣಾ ಸಾಹಿತ್ಯ ಹಾಗೂ ವಿವರಣಾ ಸಾಹಿತ್ಯದ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

12. ಭಾಷಾ ಕಲಿಕೆಯಲ್ಲಿ ಗದ್ಯ ಸಾಹಿತ್ಯದ ಜೊತೆಗೆ ಜನಪದ ಸಾಹಿತ್ಯ ಹಾಗೂ ನಾಟಕಗಳಿಗೆ ಸ್ಥಳವಿರಬೇಕು. ವಿಶ್ಲೇಷಿಸಿ.

13. ಬೆಳವಣಿಗೆ ಸಮೀಪ ವಲಯ ಎಂದರೇನು? ಈ ಹಂತದಲ್ಲಿ ಶಿಕ್ಷಕರು ಹಾಗೂ ಸಹಪಾಠಿಗಳು ಸಾರುವೆಯಂತೆ ವಿದ್ಯಾರ್ಥಿಯ ಕಲಿಕೆಯಲ್ಲಿ ಹೇಗೆ ಸಹಾಯಕವಾಗಬಲ್ಲದು?

14. ಸಾಹಿತ್ಯದ ಓದಿನಿಂದಾಗುವ ಯಾವುದಾದರೂ ನಾಲ್ಕು ಅನುಕೂಲಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

15. ಭಾಷಾ ಶಿಕ್ಷಕರಿಗೆ ಪದ ಭಂಡಾರ ದೊಡ್ಡದಿರಬೇಕು ಹಾಗೂ ಮಕ್ಕಳ ಹಿನ್ನೆಲೆಯ ಬಗ್ಗೆ ಅರಿವಿರಬೇಕು. ಏಕೆ?

16. ಇತರರ ಮಾತುಗಳನ್ನು ತಾಳ್ಮೆಯಿಂದ ಆಲಿಸುವ ಗುಣ ಈ ಸ್ವಕಲಿಕಾ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ನೀವು ಹಮ್ಮಿಕೊಳ್ಳುವ ಎರಡು ಚಟುವಟಿಕೆಗಳನ್ನು ಸೂಕ್ತ ವಿವರದೊಂದಿಗೆ ಬರೆಯಿರಿ.

17. "ಭಾಷಾ ಕಲಿಕೆಯಲ್ಲಿ ತಪ್ಪುಗಳು ಕಲಿಕೆಯ ಯಶಸ್ಸಿಗೆ ಅಗತ್ಯವಾದ ಮೆಟ್ಟಿಲುಗಳು" ಸಮರ್ಥಿಸಿ.

institutes.aglasem.com
aglasem.com

18. ಇಲ್ಲಿ ನೀಡಿರುವ ಲೇಖನವನ್ನು ಓದಿ, ಕೊನೆಯಲ್ಲಿ ಕೊಟ್ಟಿರುವ ಎರಡು ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಬರೆಯಿರಿ.

ಬರವಣಿಗೆಯ ಕುರಿತು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಸಮಿತಿ ನೀಡಿರುವ ಲೇಖನವು ಹೀಗಿದೆ. ಎಲ್ಲರಿಗೂ ಬರೆಯುವ ಸಾಮರ್ಥ್ಯವಿರುತ್ತದೆ. ಬರೆಯುವುದರಿಂದ ಮಾತ್ರ ಬರೆಯುವುದನ್ನು ಕಲಿಯಲು ಸಾಧ್ಯ. ಬರವಣಿಗೆ ಪ್ರಕ್ರಿಯೆಯಲ್ಲಿ ಲೇಖನದ ಸಿದ್ಧತೆ, ಚಿಂತನಾತ್ಮಕ ಸಾಮರ್ಥ್ಯ ಮತ್ತು ಬರೆಯುವ ಬಗ್ಗೆ ಅರಿವು ಮುಖ್ಯ. ಬರವಣಿಗೆ ಏಕರೂಪವಾಗಿರದೆ, ಅದರ ರೂಪ, ಆಕಾರ ಮತ್ತು ಪ್ರಕ್ರಿಯೆಯಲ್ಲಿ ಓದುವವರ ಮತ್ತು ಉದ್ದೇಶಕ್ಕೆ ಅನುಗುಣವಾಗಿ ವೈವಿಧ್ಯತೆ ಇರುತ್ತದೆ. ಸ್ನೇಹಿತನಿಗೆ ಬರೆಯುವ ಪತ್ರಕ್ಕೂ, ಇಲಾಖೆಗೆ ಕಳುಹಿಸುವ ವರದಿಗೂ, ಕವನಕ್ಕೂ ಬಹಳ ವ್ಯತ್ಯಾಸವಿದೆ. ಜೊತೆಗೆ ಓದುಗರ ನಿರೀಕ್ಷೆಗೆ ತಕ್ಕಂತೆ ಲೇಖನಗಳನ್ನು ವೈವಿಧ್ಯಮಯವಾಗಿ ಸಿದ್ಧಪಡಿಸಬೇಕಾಗಿರುತ್ತದೆ.

ಪ್ರಶ್ನೆಗಳು:

1) ಬರವಣಿಗೆ ಪ್ರಕ್ರಿಯೆಯಲ್ಲಿ ಕಂಡುಬರುವ ಅಂಶಗಳಾವುವು ?

2) ಬರವಣಿಗೆ ಏಕರೂಪವಾಗಿರುವುದಿಲ್ಲ. ಏಕೆ?

ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ (ಅ) ಅಥವಾ (ಆ) ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ. **5 × 8 = 40**

19. ಅ) ಈ ಕೆಳಗೆ ನೀಡಿರುವ ಭಾಷಾ ಕಲಿಕೆಯನ್ನು ಅನುಕೂಲಿಸುವ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

(i) ಸಂಪೂರ್ಣ ಭಾಷಾ ವಿಧಾನ

(ii) ಸಂವಹನ ವಿಧಾನ

ಅಥವಾ

ಆ) ಚಿಂತನೆ ಹಾಗೂ ಸಂವಹನ ಮಾಧ್ಯಮವಾಗಿ ಭಾಷೆಯ ಈ ಕೆಳಗಿನ ಕಾರ್ಯಗಳನ್ನು ವಿವರಿಸಿ.

(i) ಸಂಸ್ಕೃತಿಯ ವಾಹಕ

(ii) ಸೃಜನಶೀಲ ಅಭಿವ್ಯಕ್ತಿಯ ಮಾಧ್ಯಮ

20. ಅ) ನಿಮ್ಮ ಶಾಲೆಯಲ್ಲಿ ಮಕ್ಕಳು ಮನೆ ಭಾಷೆಯಿಂದ ಶಾಲೆಯ ಭಾಷೆಗೆ ಬದಲಾಗುವಾಗ ಎದುರಿಸುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನೀವು ತೆಗೆದುಕೊಳ್ಳುವ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

ಅಥವಾ

ಆ) 6ನೇ ತರಗತಿಯ ಕನ್ನಡ ವಿಷಯದಲ್ಲಿ ನಿಮಗಿಷ್ಟವಾದ ಯಾವುದಾದರೊಂದು ಗದ್ಯ ಪಾಠಕ್ಕೆ ಪರಿಶೋಧಿಸುವ ಹಾಗೂ ವಿವರಿಸುವ ಹಂತಗಳಿಗೆ ಸಂಬಂಧಿಸಿದಂತೆ ಪಾಠ ಯೋಜನೆಯನ್ನು ತಯಾರಿಸಿ.

institutes.aglasem.com
aglasem.com

21. ಅ) ಪಾಠ ಯೋಜನೆ ಎಂದರೇನು? ಪಾಠಯೋಜನೆ ಕೋಷ್ಟಕ ರೂಪದಲ್ಲಿಯೇ ಇರಬೇಕೇ? ನಿಮ್ಮ ಅಭಿಪ್ರಾಯವನ್ನು ಸೂಕ್ತ ಅಂಶಗಳೊಂದಿಗೆ ಸಮರ್ಥಿಸಿ.

ಅಥವಾ

ಆ) ಪಾಠ ಯೋಜನೆಯಲ್ಲಿ ಕಂಡುಬರುವ ಕೊರತೆಗಳನ್ನು ಗುರುತಿಸಿ. ಅವುಗಳನ್ನು ತುಂಬಿಕೊಳ್ಳಲು ದರ್ಜಾಮಾಪನ ಸಹಾಯಕ ಒಂದು ಪಾಠ ಯೋಜನೆ ದರ್ಜಾಮಾಪನಿಯನ್ನು ರಚಿಸುವ ಮೂಲಕ ಈ ಹೇಳಿಕೆಯನ್ನು ಸಮರ್ಥಿಸಿ.

22. ಅ) ಸಕ್ರಿಯ ಆಲಿಸುವಿಕೆಗೆ ಸಂಬಂಧಿಸಿದಂತೆ ಈ ಕೆಳಗೆ ನೀಡಿರುವ ತಂತ್ರಗಳನ್ನು ವಿವರಿಸಿ.

(i) ಟಿಪ್ಪಣಿ ಬರೆಯುವುದು.

(ii) ಕಥೆ ಹೇಳುವಾಗ ಮುಂದಾಗುವುದನ್ನು ಊಹಿಸುವುದು.

ಅಥವಾ

ಆ) ವಿದ್ಯಾರ್ಥಿಗಳ ಮೌಖಿಕ ಅಭಿವ್ಯಕ್ತಿಯ ಯಶಸ್ಸಿಗೆ ಶಿಕ್ಷಕರು ಅನುಸರಿಸಬೇಕಾದ ಪೂರ್ವ ಷರತ್ತುಗಳು ಯಾವುವು?

23. ಅ) ಸ್ವತಂತ್ರ ಕಲಿಕಾದಾರರು ಹಾಗೂ ಅವಲಂಬಿತ ಕಲಿಕಾದಾರರ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

ಅಥವಾ

ಆ) (i) ಇತರರ ಮಾತುಗಳನ್ನು ಅನುಕರಿಸುವುದು.

(i) ಚಿತ್ರ ನೋಡಿ ಪ್ರತಿಕ್ರಿಯೆ ನೀಡುವುದು – ಈ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಮೌಖಿಕ ಅಭಿವ್ಯಕ್ತಿಯನ್ನು ಹೇಗೆ ಬೆಳೆಸಲಾಗುತ್ತದೆ? ಚರ್ಚಿಸಿ.

24. ಅ) ಓದು ಮತ್ತು ಬರವಣಿಗೆಯ ನಡುವಿನ ಸಂಬಂಧವನ್ನು ಸ್ಪಷ್ಟೀಕರಿಸಿ.

ಅಥವಾ

ಆ) ಸಕ್ರಿಯ ಓದಿನಲ್ಲಿ ಮುಖ್ಯ ವಿಷಯ ಮತ್ತು ವಿವರಗಳು ದೃಶ್ಯೀಕರಿಸಿಕೊಳ್ಳುವುದು ಮತ್ತು ಲೇಖಕರ ಉದ್ದೇಶ ತಿಳಿಯುವ ಸಾಮರ್ಥ್ಯಗಳಿಸಿಕೊಳ್ಳುವುದು ಮುಖ್ಯ. ವಿಶ್ಲೇಷಿಸಿ.

institutes.aglasem.com

aglasem.com

25. ಅ) ತರಗತಿ ಲೈಬ್ರರಿಯ ಮೂಲಕ ವಿದ್ಯಾರ್ಥಿಗಳಲ್ಲಿ ಓದನ್ನು ಹೇಗೆ ಪ್ರೋತ್ಸಾಹಿಸುವಿರಿ? ವಿವರಿಸಿ.


ಅಥವಾ

ಆ) ಈ ಕೆಳಗೆ ನೀಡಿರುವ ಕಥೆಗೆ ಸಂಬಂಧಿಸಿದಂತೆ ಕಾರಣ – ಪರಿಣಾಮ ಗುರುತಿಸುವ ರೇಖನ ಸಂಯೋಜಕವನ್ನು (ಗ್ರಾಫಿಕ್ ಆರ್ಗನೈಸರ್) ರಚಿಸಿ.

ಪರ್ವತಪುರ ಎಂಬ ರಾಜ್ಯದಲ್ಲಿ ರಾಜ ಅರಮನೆಯಿಂದ ಹೊರಗೆ ಹೋಗುವಾಗ ಮುಕುಜ ಎಂಬ ಕುದುರೆ ಏರಿ ಸಂಚರಿಸುತ್ತಿದ್ದ. ರಾಜನ ಕುದುರೆಯಾದ ಕಾರಣ ಅದಕ್ಕೆ ರಾಜ ವೈಭೋಗ ದೊರೆಯುತ್ತಿತ್ತು. ಯುದ್ಧದ ಸಮಯದಲ್ಲಿ, ಕಾಡಿನಲ್ಲಿ ಸಂಚರಿಸುವಾಗ ಮಾತ್ರ ಮುಕುಜನಿಗೆ ಗಾಯಗಳಾಗಿ ನೋವಾಗುತ್ತಿತ್ತು. ಒಮ್ಮೆ ಆಸ್ತೇಯ ಎಂಬ ಕತ್ತೆ ತನ್ನ ಮಾಲೀಕನೊಂದಿಗೆ ರಾಜನ ಬಟ್ಟೆಗಳನ್ನು ಕೊಡಲು ಬಂದಾಗ ರಾಜನ ಕುದುರೆ ಚೆನ್ನಾಗಿ ಮೇಯುತ್ತಿರುವುದನ್ನು ಕಂಡು, ತಾನು ಕೂಡ ರಾಜನ ಕುದುರೆಯಾಗಬೇಕೆಂಬ ಆಸೆಯಾಗಿ, ಕುದುರೆಯ ಸ್ನೇಹ ಮಾಡಿ, ತನ್ನ ಮನದ ಇಂಗಿತವನ್ನು ಹಂಚಿಕೊಂಡಾಗ ಕುದುರೆಗೂ ಕೆಲವು ದಿನಗಳ ಕಾಲ ಈ ಬಂಧನದಿಂದ ದೂರವಿದ್ದು, ಸ್ವಚ್ಛಂದವಾಗಿ ಜೀವಿಸಲು ತೀರ್ಮಾನಿಸಿ, ತಮ್ಮ ಕೆಲಸವನ್ನು ಅದಲು ಬದಲು ಮಾಡಿಕೊಂಡರು. ಆಸ್ತೇಯ ಕತ್ತೆ ಅರಮನೆಯಲ್ಲಿ ಒಳ್ಳೆಯ ಭೋಜನ ಸವಿದು ಸಂತೋಷದಿಂದಿದ್ದರೆ, ಮುಕುಜ ಕುದುರೆ ಅಗಸನ ಕೆಲಸ ಮಾಡಿ ಸ್ವಚ್ಛಂದವಾಗಿ ಅಲೆಯ ತೊಡಗಿತು.

ಕೆಲವು ದಿನಗಳ ನಂತರ ಕತ್ತೆಗೆ ಯುದ್ಧಗಳಲ್ಲಿ ಭಾಗವಹಿಸಲೇ ಬೇಕಾಯಿತು. ಆಗ ಅದಕ್ಕೆ ಗಾಯಗಳು ಉಂಟಾದಾಗ ತಾನು ಅಗಸನೊಂದಿಗೆ ಕೆಲಸ ಮಾಡುವ ಜೀವನವೇ ಚೆನ್ನಾಗಿತ್ತು ಎಂದುಕೊಂಡಿತು. ಅದೇ ರೀತಿ ಕುದುರೆಯು ಅರಮನೆಯಲ್ಲಿ ಇರುವಾಗ ಸಿಗುತ್ತಿದ್ದ ಸ್ಥಾನಮಾನ ಅಗಸನ ಬಳಿ ಸಿಗದೆ ಕೊರಗತೊಡಗಿತ್ತು. ಒಂದು ದಿನ ಕತ್ತೆ ಹಾಗೂ ಕುದುರೆ ಪರಸ್ಪರ ಭೇಟಿಯಾಗಿ ತಮಗೆ ಒದಗಿದ್ದ ಕೆಲಸವೇ ಶ್ರೇಷ್ಠ ಎಂದು ಅರಿತು, ಮರಳಿ ತಮ್ಮ ತಮ್ಮ ಕೆಲಸವನ್ನು ವಹಿಸಿಕೊಂಡು ಸುಖವಾಗಿ ಬಾಳಿದವು.

26. ಅ) ಇಲ್ಲಿ ಕೊಟ್ಟಿರುವ ಚಿತ್ರಗಳಿಗೆ ಸರಿಹೊಂದುವಂತೆ ಕಥೆ, ಕವನ, ನಾಟಕ, ಪ್ರಬಂಧ, ಲೇಖನ – ಇವುಗಳಲ್ಲಿ ಯಾವುದಾದರೂ ಎರಡು ಪ್ರಕಾರಗಳಿಗೆ ಸಂಬಂಧಿಸಿದಂತೆ ಸಾಹಿತ್ಯವನ್ನು ರಚಿಸಿ.



ಅಥವಾ

ಆ) ಸಮಾಜದಲ್ಲಿ ಸಾಧನೆಯ ಮೂಲಕ ಶ್ರೇಷ್ಠರೆನಿಸಿದ ಒಬ್ಬ ವ್ಯಕ್ತಿಯ ಕಥೆಯನ್ನು ಬರೆಯಿರಿ.

institutes.aglasem.com
aglasem.com

DO NOT WRITE ANYTHING HERE

institutes.aglasem.com

aglasem.com

Answer Key

institutes.aglasem.com

aglasem.com

ಮಾದರಿ ಉತ್ತರಗಳು
MODEL ANSWERS

ಸಂಕೇತ ಸಂಖ್ಯೆ : 444-K

Code No. : 444-K

ಡಿ.ಎಲ್.ಇಡಿ. ದ್ವಿತೀಯ ವರ್ಷ
D.El.Ed. SECOND YEAR
ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ.)
ಪ್ರಥಮ ಭಾಷೆ – ಕನ್ನಡ
FACILITATING LEARNING (HPS)
FIRST LANGUAGE – KANNADA

ದಿನಾಂಕ : 11. 07. 2022] [ಗರಿಷ್ಠ ಅಂಕಗಳು : 60

Date : 11. 07. 2022] [Max. Marks : 60

ಭಾಗ – I

ಬಹು-ಆಯ್ಕೆಯ ಉತ್ತರಗಳು : (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ) **1 × 10 = 10**

1. (D) ಇವುಗಳೆಲ್ಲವೂ ಸರಿ
2. (C) II ಮತ್ತು IV ಸರಿ
3. (B) 5E ರಚನಾವಾದಿ ವಿಧಾನ
4. (D) ಮಗುವಿಗೆ ಕಲಿಕಾಂಶಗಳೊಡನೆ ಸಂಬಂಧಿಕರಿಸಲು ಸಾಧ್ಯವಾಗುವುದು
5. (D) ಇವುಗಳೆಲ್ಲವೂ
6. (B) ಮೌಖಿಕ
7. (C) ಶಿಕ್ಷಕರು
8. (B) ಗಟ್ಟಿ ಓದುವುದು
9. (C) ಪ್ರತಿದಿನ ಅಸೆಂಬ್ಲಿಯಲ್ಲಿ ವಾರ್ತೆ ಓದುವ ಮಗುವಿಗೆ ವಾರ್ತೆ ಓದುವ ತರಬೇತಿ
10. (D) ಇವುಗಳೆಲ್ಲವೂ

ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : **2 × 5 = 10**

11. ***ಭಾಷಾ ಬೆಳವಣಿಗೆಯಲ್ಲಿ ನಾಟಕ ಸಾಹಿತ್ಯದ ಪಾತ್ರ :***

    * ಶಿಕ್ಷಣದಲ್ಲಿ ನಾಟಕ ಬಳಸುವುದರಿಂದ ಅನೇಕ ಮಾನವ ವಿಕಾಸ ಮತ್ತು ಭಾಷಾ ಬೆಳವಣಿಗೆಯ ಗುರಿಯನ್ನು ಸಾಧಿಸಬಹುದು.

institutes.aglasem.com

aglasem.com

* ನಾಟಕಗಳು ಪಾತ್ರಗಳ ಮೂಲಕ ನೇರವಾಗಿ ತಮ್ಮ ಭಾವನೆಗಳನ್ನು ತೋಡಿಕೊಳ್ಳುತ್ತವೆ.
* ಸಹಕಾರಿ ಮನೋಭಾವ ಬೆಳೆಯುತ್ತದೆ.
* ತಾದ್ಯಾತ್ಮ ಕಾಳಜಿ ಬೆಳೆಸಲು ನಾಟಕ ಪ್ರಭಾವಶಾಲಿ ಮಾಧ್ಯಮ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

12. ***ಗದ್ಯ ಪ್ರಕಾರಕ್ಕೂ ಮತ್ತು ಪದ್ಯ ಪ್ರಕಾರಕ್ಕೂ ಇರುವ ವ್ಯತ್ಯಾಸ :***

* ಗದ್ಯ ಮಗು ಹೇಗೆ ಮಾತನಾಡಬೇಕೆಂದು ಕಲಿಸುತ್ತದೆ.
* ಪದ್ಯ ರಾಗ, ತಾಳ, ಹಾವ, ಭಾವ-ಲಯ ಕಲಿಸುತ್ತದೆ.
* ಗದ್ಯದಲ್ಲಿ ರಸಾನುಭಾವ ಸಾಧ್ಯವಾಗುವುದಿಲ್ಲ.
* ಪದ್ಯದಲ್ಲಿ ರಸಾನುಭಾವ ಉಂಟಾಗುತ್ತದೆ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

13. ***ಕನ್ನಡ ಭಾಷಾ ಶಿಕ್ಷಕನಿಗೆ ಕನ್ನಡ ಅಧ್ಯಯನ ಪ್ರೌಢಿಮೆ ಇರಬೇಕು. ಈ ಮಾತಿನ ಸಮರ್ಥನೆ :***

* ಕನ್ನಡದ 4 ಕೌಶಲಗಳ ಜ್ಞಾನ ಅವಶ್ಯಕತೆ ಇದೆ.
* ಪದ ಭಂಡಾರ ದೊಡ್ಡದಿರಬೇಕು.
* ಶಿಕ್ಷಕನು ಅಧ್ಯಯನಶೀಲನಾಗಿರಬೇಕು.
* ಸಾಹಿತ್ಯದ ಅನುಭವ ಇರಬೇಕು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

14. ***ಬೋಧನೆಯನ್ನು ಪರಿಣಾಮಕಾರಿಯನ್ನಾಗಿಸಲು ಕಲಿಕಾ ಸಂಪನ್ಮೂಲಗಳು ಬಳಸುವಿಕೆ :***

* ನಮ್ಮ ಸುತ್ತಮುತ್ತಲಿನ ವ್ಯಕ್ತಿಗಳು.
* ಸಮೀಪದಲ್ಲಿ ದೊರೆಯುವ ವಿವಿಧ ವಸ್ತುಗಳು.
* ನಡೆಯುವ ಘಟನೆಗಳು.
* ಪ್ರಕಟವಾಗುವ ವಿವಿಧ ಪತ್ರಿಕೆಗಳು.
* ಸಾಹಿತ್ಯ ಹಾಡುಗಳ ಸಿಡಿಗಳು, ವಿಡಿಯೋ ಇತ್ಯಾದಿ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

institutes.aglasem.com

aglasem.com

15. **ಭಾಷಾ ಶಿಕ್ಷಕರು ಬೋಧನೆ ಮಾಡುವ ಸಂದರ್ಭದಲ್ಲಿ ಜನಪದ ಸಾಹಿತ್ಯವನ್ನು ಬಳಸಿಕೊಳ್ಳುವಿಕೆ :**

* ಗಾದೆಗಳು, ಒಗಟುಗಳು, ಹಾಡುಗಳು, ಕಥೆಗಳು ಬಯಲಾಟಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಬಳಸುವುದು.
* ನಮ್ಮ ಸಂಸ್ಕೃತಿಯನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು.
* ಕಲೆ, ಆರ್ಥಿಕತೆ, ನಂಬಿಕೆ, ತತ್ವ ಸಂದರ್ಭಕ್ಕನುಗುಣವಾಗಿ ಬಳಸುವುದು.
* ಬಯಲಾಟ, ಪಾರಿಜಾತ ಆಟ ಇತ್ಯಾದಿಗಳನ್ನು ಉದಾಹರಣೆಯಾಗಿ ಬಳಸಬಹುದು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

16. ***ತರಗತಿಯಲ್ಲಿ ಮೌಖಿಕ ಕೌಶಲಗಳ ಚಟುವಟಿಕೆಗಳನ್ನು ಆಯೋಜಿಸಿದಾಗ ಮೌಲ್ಯಮಾಪನ ಮಾಡಲು ಸೂಕ್ತವಾದ ಮಾಪಕ ಸೂಚಿಗಳು :***

* ಆಲಿಸುವ ವಿಷಯಗಳ ಅರ್ಥೈಸಿಕೊಳ್ಳುವಿಕೆ.
* ಶಬ್ದಗಳ ಉಚ್ಚಾರ, ಧ್ವನಿಗಳ ಏರಿಳಿತ.
* ಪದಗಳ ಔಚಿತ್ಯ ಪೂರ್ಣ ಬಳಕೆ
* ಮಾತಿನಲ್ಲಿ ತಾರ್ಕಿಕತೆ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

17. ***ವಿದ್ಯಾರ್ಥಿಗಳಲ್ಲಿ ಸಕ್ರೀಯ ಆಲಿಸುವಿಕೆಯನ್ನು ಬೆಳೆಸಲು ಕೈಗೊಳ್ಳುವ ತಂತ್ರಗಳು :***

* ವಿದ್ಯಾರ್ಥಿಗಳು ತಾವು ಕೇಳಿದ್ದನ್ನು ಟಿಪ್ಪಣಿ ಮಾಡಿಕೊಳ್ಳಲು ಅವಕಾಶ ನೀಡುವುದು.
* ಪ್ರಶ್ನೆ ಕೇಳುವುದು ಮತ್ತು ಪ್ರಶ್ನೆ ಕೇಳಲು ಅವಕಾಶ ನೀಡುವುದು.
* ಕಥೆ ಹೇಳುವಾಗ ಮುಂದಾಗುವುದನ್ನು ಊಹಿಸಲು ಅವಕಾಶ ನೀಡುವುದು.
* ವಿದ್ಯಾರ್ಥಿಗಳು ತಾವು ಆಲಿಸಿರುವುದಕ್ಕೆ ಮತ್ತು ತಮಗೆ ತಿಳಿದಿದ್ದು ಅಥವಾ ತಮ್ಮ ಅನುಭವಗಳಿಗೆ ಸಂಬಂಧ ರಚಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವುದು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

18. ***ಚಿತ್ರಕ್ಕೆ ಸರಿ ಹೊಂದುವ ಗಾದೆ ಮಾತುಗಳು :***

* ತಾಯಿಗಿಂತ ಬಂಧವಿಲ್ಲ; ಉಪ್ಪಿಗಿಂತ ರುಚಿಯಿಲ್ಲ.

institutes.aglasem.com
aglasem.com

* ತಾಯಿಯೇ ದೇವರು.
* ಮನೆಯೇ ಮೊದಲ ಪಾಠಶಾಲೆ; ಜನನಿ ತಾಯಿ ಮೊದಲ ಗುರು.
* ನೂಲಿನಂತೆ ಸೀರೆ; ತಾಯಿಯಂತೆ ಮಗಳು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ಪ್ರತಿ ಅಂಶಕ್ಕೆ ½ ಅಂಕದಂತೆ ಅಂಕ ನೀಡುವುದು. ½ × 4 = 2

ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಅಥವಾ (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ.
ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ : **5 × 8 = 40**

19. a) ***ತರಗತಿಯು ಭಾಷೆಯನ್ನು ಪೋಷಿಸುವ ತರಗತಿಯನ್ನಾಗಿ ಮಾಡಲು ಮಾಡಿಕೊಳ್ಳಬೇಕಾದ ಸಿದ್ಧತೆಗಳು :***

* ಕನ್ನಡ ಭಾಷಾ ಕೌಶಲಗಳ ಅರಿವನ್ನು ಪಡೆದುಕೊಂಡಿರಬೇಕು.
* ಮೌಖಿಕ ಅಭಿವ್ಯಕ್ತಿಗೂ, ಬರವಣಿಗೆಗೂ ಇರುವ ವ್ಯತ್ಯಾಸಗೊತ್ತಿರಬೇಕು.
* ಪದಪ್ರಯೋಗ ಎಲ್ಲಿ ಮಾಡಿದರೆ ಯಾವ ಅರ್ಥ ಕೊಡುತ್ತದೆ ಎನ್ನುವ ಸೂಕ್ಷ್ಮ ಗ್ರಹಿಕೆ ಇರಬೇಕು.
* ತರಗತಿಗೆ ವಿದ್ಯಾರ್ಥಿ ತನ್ನೊಂದಿಗೆ ತರುವ ಕನ್ನಡ ಸೊಗಡನ್ನು ಗೌರವಿಸುತ್ತಲೇ ಅವರನ್ನು ಅಧ್ಯಯನಕ್ಕಾಗಿ ಬಳಸುವ ಕನ್ನಡದೆಡೆದೆ ಕರೆದೊಯ್ಯಬೇಕು.
* ನಿರೂಪಣೆ ಮತ್ತು ವಿವರಣಾತ್ಮಕ ಸಾಹಿತ್ಯದ ಬಗ್ಗೆ ತಿಳಿದುಕೊಂಡಿರಬೇಕು.
* ಮಕ್ಕಳ ಹಿನ್ನಲೆಯ ಬಗ್ಗೆ ಅರಿವು ಮತ್ತು ವೈವಿಧ್ಯತೆಯನ್ನು ಪೋಷಿಸಿ ಬೆಳೆಸುವ ಸಾಮರ್ಥ್ಯ ಮೈಗೂಡಿಸಿಕೊಂಡಿರಬೇಕು.
* ಸಾಹಿತ್ಯದ ವಿವಿಧ ಮಜಲುಗಳ ಬಗ್ಗೆ ತಿಳಿದುಕೊಂಡಿರಬೇಕು.
* ಪ್ರಬಂಧ, ಭಾಷಣ, ಚರ್ಚೆ ಇತ್ಯಾದಿಕ್ರಮಬದ್ಧವಾಗಿ ಮಂಡಿಸಬೇಕು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. 1 × 5 = 5

b) ***ಭಾಷಾ ಶಿಕ್ಷಕರಾದ ಸಾಹಿತ್ಯದ ಓದಿನಿಂದ ಆಗುವ ಅನುಕೂಲಗಳು :***

* ಸಾಹಿತ್ಯದಲ್ಲಿ ವೈವಿಧ್ಯತೆ ಇರುತ್ತದೆ ಹಲವುಸಲ ಭಾಷೆಯ ಅನಿರೀಕ್ಷಿತ ಬಳಕೆ ನಮ್ಮನ್ನು ಚಕಿತಗೊಳಿಸುತ್ತದೆ.
* ಸಾಹಿತ್ಯದಿಂದ ವಿದ್ಯಾರ್ಥಿಗಳ ಭಾಷಾ ಬೆಳವಣಿಗೆಗೆ ನೇರವಾಗಿ ಕೊಡುಗೆ ನೀಡಲು ಸಾಧ್ಯವಾಗುತ್ತದೆ.

institutes.aglasem.com
aglasem.com

* ಸಾಹಿತ್ಯದ ಜ್ಞಾನದಿಂದ ನಮ್ಮ, ಸಂಸ್ಕೃತಿ ಪರಂಪರೆಯನ್ನು ಸಮರ್ಥವಾಗಿ ಎಲ್ಲಾ ಕಲಿಕಾವರ್ಗಕ್ಕೆ ತಲುಪಿಸಬಹುದು.
* ವಿದ್ಯಾರ್ಥಿಗಳ ಅರ್ಥೈಸಿಕೊಳ್ಳುವಿಕೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ.
* ವಿದ್ಯಾರ್ಥಿಯ ವ್ಯಕ್ತಿತ್ವದ ಬೆಳವಣಿಗೆ ಮಾಡಲು ಸಹಾಯಕವಾಗುತ್ತದೆ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

20. a) ***5E ಮಾದರಿಯಲ್ಲಿ ಪಾಠಬೋಧನೆ ಮಾಡಲು ಅನುಕೂಲವಾದ ವಿಧಾನಗಳು :***

i) ತೊಡಗಿಸಿಕೊಳ್ಳುವುದು
ii) ಪರಿಶೋಧಿಸುವುದು
iii) ವಿವರಿಸುವುದು
iv) ವಿಸ್ತರಿಸುವುದು
v) ಮೌಲ್ಯಮಾಪನ ಮಾಡುವುದು

ತೊಡಗಿಸಿಕೊಳ್ಳುವುದು :

* ಕಲಿಕೆ ಅನುಕೂಲಿಸುವ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾನೆ.
* ಅಗತ್ಯವಿರುವಂತೆ ಪ್ರಶ್ನೆ ಮಕ್ಕಳಿಗೆ ಕೇಳುವುದು.
* ಚಿಕ್ಕ ಚಿಕ್ಕ ಗುಂಪು ರಚನೆ ಮಾಡುವುದು.
* ವಿವಿಧ ಚಟುವಟಿಕೆಗಳನ್ನು ಈ ಹಂತದಲ್ಲಿ ಮಾಡಬಹುದು.

ಪರಿಶೋಧಿಸುವುದು :

* ಈ ಹಂತದಲ್ಲಿ ವಿವಿಧ ಚಟುವಟಿಕೆಗಳನ್ನು ನೀಡೀ ಅವರೇ ಕಲಿಯಬೇಕಾದ ಪರಿಕಲ್ಪನೆಗಳ ಕುರಿತಂತೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಅನುಕೂಲಿಸಬೇಕು.
* ವಿದ್ಯಾರ್ಥಿಗಳೊಡನೆ ಮುಕ್ತವಾಗಿ ಚರ್ಚಿಸಬೇಕು.
* ವಿದ್ಯಾರ್ಥಿಗಳ ಚಿಂತನೆ ಉದ್ದೇಶಿತ ದಿಕ್ಕಿನಲ್ಲಿ ಸಾಗುವಂತೆ ಸಹಾಯ ಮಾಡಬೇಕು.

ವಿವರಿಸುವುದು :

* ಈ ಹಂತದಲ್ಲಿ ಮಕ್ಕಳು ತಾವು ಪರಿಶೋಧನೆ ಮೂಲಕ ತಿಳಿದುಕೊಂಡಿರುವುದನ್ನು ತರಗತಿಯಲ್ಲಿ ಮಾಡಿಸುತ್ತಾರೆ.
* ಮಕ್ಕಳಲ್ಲಿ ಕೊರತೆ ಕಂಡುಬಂದರೆ ಸೂಕ್ತ ಪ್ರಶ್ನೆ ಕೇಳಿ ಸ್ವ-ಅವಲೋಕನದಲ್ಲಿ ತೊಡಗಿಸಬಹುದು.
* ವಿಷಯ ಮಂಡನೆ ಬಳಿಕ ಚರ್ಚೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಕಲಿಕೆ ದೃಢವಾಗಲು ಸಾಧ್ಯವಾಗುತ್ತದೆ.

institutes.aglasem.com
aglasem.com

ವಿಸ್ತರಿಸುವುದು :

* ಕಲಿಕೆ ವಿಸ್ತರಣೆ ಕಲಿಕಾದಾರರಿಗೆ ತಮ್ಮ ಕಲಿಕೆ ಕುರಿತಂತೆ ಭರವಸೆ ಬೆಳೆಸಿಕೊಳ್ಳಲು ಯಅವಕಾಶ ನೀಡುತ್ತದೆ.
* ಕಲಿಕೆ ಉಳಿಯಬೇಕಾದರೆ ಅದನ್ನು ವಿಸ್ತರಿಸಿಕೊಳ್ಳುವುದು ಅಗತ್ಯ.
* ಇದಕ್ಕಾಗಿ ಕೆಲವೊಂದು ಚಟುವಟಿಕೆಗಳನ್ನು ನೀಡಬೇಕಾಗುತ್ತದೆ.

ಮೌಲ್ಯ ಮಾಪನ ಮಾಡುವುದು :

* ಶಿಕ್ಷಕರು ಕೆಲವೊಂದು ಪ್ರಶ್ನೆ ಕೇಳುತ್ತಾರೆ.
* ಪರೀಕ್ಷೆಗಳನ್ನು ನಡೆಸಬಹುದು.
* ಹಿಮ್ಮಾಯಿತಿ ಕೊಡಬೇಕು.
* ಕಲಿಕೆಯಲ್ಲಿನ ಕೊರತೆ ಮತ್ತು ಅವುಗಳನ್ನು ತಾಯಿಯ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ ವಿಧಾನ ಹೇಳಿದರೆ 2 ಅಂಕ, ಎರಡು ವಿವರಣೆಗೆ 1½ ಅಂಕದಂತೆ 3 ಅಂಕಗಳನ್ನು ನೀಡುವುದು. 2 + 3 = 5

ಅಥವಾ

b) ***ಭಾಷಾ ಕಲಿಕೆ ಅನುಕೂಲಿಸುವ ಸಂವಹನ ವಿಧಾನದ ಲಕ್ಷಣಗಳು :***

* ಭಾಷೆಯ ಬಳಕೆ ಹಾಗೂ ಪಾರಸ್ಪರಿಕ ಸಂವಹನದ ಮೇಲೆ ಒತ್ತು ನೀಡುತ್ತದೆ.
* ಕಲಿಕೆಯ ಸಂದರ್ಭದಲ್ಲಿ ವಿಶ್ವಾಸನೀಯ ಪಠ್ಯ ಹಾಗೂ ಸಂಪನ್ಮೂಲಗಳ ಬಳಕೆ.
* ಕಲಿಕಾದಾರರು ಭಾಷೆಯನ್ನು ಕಲಿಯುವವರೊಂದಿಗೆ ಭಾಷಾ ಕಲಿಕೆಯ ಪ್ರಕ್ರಿಯೆಯನ್ನು ಗಮನಿಸಲು ಅವಕಾಶ.
* ಭಾಷೆಯ ಬಳಕೆ ಹೇಗಾಗುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತದೆ.
* ಕಲಿಕಾದಿಂದ ವೈಯಕ್ತಿಕ ಅನುಭವಗಳು ತರಗತಿ ಕಲಿಕೆಯನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ.
* ತರಗತಿಯಲ್ಲಿ ಕಲಿಯುವ ಭಾಷೆಯನ್ನು ತರಗತಿ ಚಟುವಟಿಕೆಗಳಿಗೆ ಸಂಬಂಧಿಕರಿಸಿಕೊಳ್ಳಲು ಪ್ರಯತ್ನ.
* ಯಾವ ಅಭಿವ್ಯಕ್ತಿ ಯಾವ ಅರ್ಥವನ್ನು ಸೂಚಿಸುತ್ತದೆ ಎನ್ನುವುದನ್ನು ಆಯಾ ಸಂದರ್ಭವೇ ನಿಗದಿಪಡಿಸುತ್ತದೆ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. 1 × 5 = 5

institutes.aglasem.com
aglasem.com

21. a) ***ಬೋಧನೆಯನ್ನು ಪರಿಣಾಮಕಾರಿಯನ್ನಾಗಿಸಲು ಕಲಿಕಾ ಸಂಪನ್ಮೂಲಗಳನ್ನು ಬಳಸುವಿಕೆ :***

* ನಮ್ಮ ಸುತ್ತಲಿರುವ ವ್ಯಕ್ತಿಗಳು, ವಿವಿಧ ವಸ್ತುಗಳು, ನಡೆಯುವ ಘಟನೆಗಳು, ಪ್ರಕಟವಾಗುವ ವಿವಿಧ ರೀತಿಯ ಪತ್ರಿಕೆಗಳು, ಸಾಹಿತ್ಯ, ಹಾಡುವ ಸಿಡಿಗಳು, ವಿಡಿಯೋಗಳು, ಸಿನಿಮಾ ನಾಟಕ ಪ್ರದರ್ಶನ ಇತ್ಯಾದಿಗಳು ಕಲಿಕಾ ಸಂಪನ್ಮೂಲಗಳಾಗಿವೆ.
* ಕಲಿಕಾಂಶಗಳು ತಿಳಿದ ಬಳಿಕ ಯಾವ ಸಂಪನ್ಮೂಲಗಳನ್ನು ಬಳಸಬಹುದು ಎಂದು ಯೋಜಿಸಬಹುದು.
* ಪದ್ಯ ಬೋಧನೆ ಮಾಡುವಲ್ಲಿ ಸಿಡಿಗಳನ್ನು ಹಾಕಿಸಿ ಮಕ್ಕಳಿಗೆ ಬೋಧನೆ ಮಾಡಬಹುದು.
  ಉದಾ. : ಕೆಲವೊಂದು ಸಾಹಿತಿಗಳ ಪಾಠಬೋಧನೆ ಮಾಡುವ ಸಂದರ್ಭದಲ್ಲಿ ಪತ್ರಿಕೆಗಳ ತುಳುಕುಗಳನ್ನು ಉಪಯೋಗಿಸಿಕೊಳ್ಳಬಹುದು.
* ಕೆಲವೊಂದು ಪದ್ಯಗಳನ್ನು ವಿಡಿಯೋ ಮುಖಾಂತರ ಮಕ್ಕಳಿಗೆ ತಿಳಿಸಬಹುದು.
* ಲೇಖಕರು ಅಥವಾ ಕವಿಗಳು ಜೀವಂತವಾಗಿದ್ದರೆ ಅವರ ಮನೆಗೆ ಭೇಟಿ ನೀಡಬಹುದು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

ಅಥವಾ

b) ***ಮಕ್ಕಳನ್ನು ಮನೆಭಾಷೆಯಿಂದ ಶಾಲಾಭಾಷೆಗೆ ಬದಲಾಯಿಸಿಕೊಳ್ಳಲು ಶಿಕ್ಷಕರು ಕೈಗೊಳ್ಳುವ ಕ್ರಮಗಳು:***

* ವಿದ್ಯಾರ್ಥಿಗಳು ಮನೆಯಲ್ಲಿ ಯಾವ ಭಾಷೆ ಬಳಸುತ್ತಾರೆ ಎಂಬುದನ್ನು ಶಿಕ್ಷಕರು ಮಾಹಿತಿ ಹೊಂದಿರಬೇಕು.
* ಪ್ರತಿಯೊಂದು ಮಗುವಿಗೂ ತನ್ನ ಮನೆಭಾಷೆ ಶಾಲೆ ಗೌರವಿಸುತ್ತದೆ ಎಂಬ ಭರವಸೆ ಮೂಡಿಸುವುದು.
* ತನ್ನ ಪರಿಸರದಲ್ಲಿ ಬೆಳೆದ ಮಗುವಿಗೆ ಔಪಚಾರಿಕ ಭಾಷೆಯಲ್ಲಿ ಅರ್ಥೈಸಿಕೊಳ್ಳುವುದು.
* ಮಕ್ಕಳು ಶಾಲೆಯ ಭಾಷೆ ಸ್ವೀಕರಿಸುವಂತೆ ಮಾಡಲು ಪೋಷಕರ ಜೊತೆ ಸಂವಾದ ನಡೆಸುವುದು.
* ಭಾಷೆಯನ್ನು ಕಲಿಯಲು ಉತ್ತಮ ವಾತಾವರಣ ನಿರ್ಮಾಣ ಮಾಡುವುದು.
* ಶಾಲೆಯಲ್ಲಿನ ಎಲ್ಲಾ ಶಿಕ್ಷಕರು ಒಂದೇ ಸ್ಪಷ್ಟನಿಲುವು ತಾಳುವಂತೆ ಮಾಡುವುದು.
* ಶಾಲೆಯಲ್ಲಿ ಮಗುವಿಗೆ ಆತ್ಮೀಯ ವಾತಾವರಣ ನಿರ್ಮಾಣ ಮಾಡುವರು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

institutes.aglasem.com
aglasem.com

22. a) ***ಪಾಠಯೋಜನೆಯಲ್ಲಿ ಒಳಗೊಂಡಿರುವ ಅಂಶಗಳು, ಪಾಠಯೋಜನೆ ಕೋಷ್ಟಕರೂಪದಲ್ಲಿಯೇ ಇರಬೇಕೆ? ಅಭಿಪ್ರಾಯ :***

* ಪಾಠ ಯಾವ ಕಾರಣಕ್ಕಾಗಿ ಬೋಧನೆ ಮಾಡುತ್ತಿದ್ದೇನೆ ಎನ್ನುವ ಕುರಿತು ಮೊದಲಿಗೆ ಉದ್ದೇಶ ಸ್ಪಷ್ಟವಾಗಿರಬೇಕು.
* ಒಂದು ಅವಧಿಯಲ್ಲಿ ಶಿಕ್ಷಕನಾದವನ್ನು ಏನೇನು ಕಲಿಸಲು ಸಾಧ್ಯವಿದೆ ಎಂಬುದ್ನು ತಿಳಿಯಲು ಕಲಿಕಾಂಶ ಸ್ಪಷ್ಟವಾಗಿರಬೇಕು.
* ಮಕ್ಕಳಲ್ಲಿ ಯಾವ ಸಾಮರ್ಥ್ಯ ಬೆಳೆಸಲು ಈ ಪಾಠದಿಂದ ಸಾಧ್ಯವಿದೆ ಎಂಬ ಸ್ಪಷ್ಟತೆ ಇರಬೇಕು.
* ಕಲಿಕಾ ಪ್ರಕ್ರಿಯೆಗಳ ಬಗ್ಗೆ ಪರಿಪೂರ್ಣವಾಗಿ ತಿಳಿದುಕೊಂಡಿರಬೇಕು.
* ಮೌಲ್ಯಮಾಪನ ಮಾಡಲು ಅವಕಾಶವಿರಬೇಕು.
* ಪಾಠಯೋಜನೆ ಕೋಷ್ಟಕ ರೂಪದಲ್ಲಿ ಇರುವುದು ಖಂಡಿತ ಅಗತ್ಯವಿಲ್ಲ.
* ಪಾಠಯೋಜನೆ ಬಳಸುವವರಿಗೆ, ಓದುವವರಿಗೆ ಸ್ಪಷ್ಟವಾಗಿ ಅರ್ಥವಾಗುವಂತಿರಬೇಕು.
* ಪ್ರತಿ ತರಗತಿ ಕಲಿಕೆಯನ್ನು ಒಂದು ಸಮಗ್ರ ಅನುಭವವನ್ನಾಗಿ ನೋಡುವುದು ಅಗತ್ಯ ಎಂದು ರಚನಾವಾದಿ ತತ್ವ ಅಪೇಕ್ಷಿಸುತ್ತದೆ.

ಸೂಚನೆ : ಅಂಶಗಳಿಗೆ 2½ ಮತ್ತು ಅಭಿಪ್ರಾಯಕ್ಕೆ 2½ ದಂತೆ ಅಂಕವನ್ನು ನೀಡುವುದು ಮತ್ತು ಉತ್ತರವನ್ನು ಪರಿಶೀಲಿಸುವಾಗ ಸೂಕ್ತ ಅಂಶಗಳಿದ್ದರೆ ಅಂಕ ನೀಡುವುದು. 5

ಅಥವಾ

b) ***"ಭಾಷಾ ಶಿಕ್ಷಣವು ಬಹುಭಾಷಾ ಕಲಿಕೆಯನ್ನು ಪ್ರೋತ್ಸಾಹಿಸಬೇಕು." ಈ ಹೇಳಿಕೆಯ ಸಮರ್ಥನೆ :***

* ಒಬ್ಬ ವ್ಯಕ್ತಿ ಹಲವು ಭಾಷೆಗಳನ್ನು ಬಳಸಬೇಕಾಗಿರುವ ಸಾಮಾಜಿಕ ಸಂದರ್ಭ ಬಹುಭಾಷಿಕತೆಗೆ ಎಡೆಮಾಡಿಕೊಡುತ್ತದೆ.
* ಶಾಲೆಯಲ್ಲಿ ಕನಿಷ್ಠ 3 ಭಾಷೆ ಮಗುಕಲಿಯುತ್ತದೆ. ಪರಿಸರದಲ್ಲಿ ಬೇರೆ ಬೇರೆ ಭಾಷೆ ಕಲಿಯುತ್ತದೆ.
* ಬಹುಭಾಷಾ ಕಲಿಕೆ ಉತ್ತೇಜಿಸುವುದರಿಂದ ಕಲಿಯುವವರು ನಮ್ಮ ದೇಶದ ಸಂಸ್ಕೃತಿ ಮತ್ತು ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳತ್ತಾರೆ.
* ಬಹುಭಾಷಾ ಕಲಿಕೆಯುವ ಮಕ್ಕಳ ಜ್ಞಾನಾರ್ಜನೆ ಹಾಗೂ ಶೈಕ್ಷಣಿಕ ಸಾಧನೆಯ ಮೇಲೆ ಧನಾತ್ಮಕ ಪ್ರಭಾವ ಬೀರುತ್ತದೆ.
* ನಮ್ಮ ದೇಶದಲ್ಲಿ ರೂಢಿಯಲ್ಲಿರು ಸಂಸ್ಕೃತಿ ಹಾಗೂ ಬೌದ್ಧಿಕ ಅಂಶಗಳು ವೈವಿಧ್ಯಮಯವಾಗಿದ್ದು ಬಹುಭಾಷಾ ಕಲಿಕೆಯಿಂದ ವೈವಿಧ್ಯಮಯ ಚಿಂತನೆ ಕುಡಿಯೊಡೆಯುತ್ತದೆ.
* ಬಹುಭಾಷಾ ಪೌಢಿಮೆಯು ಅರಿವಿನ ಸಂವರ್ಧನೆ, ಸಾಮಾಜಿಕ ಸಹನೆ, ವೈದ್ಯತೆಯ ಚಿಂತನೆ ಮತ್ತು ವಿದ್ಯಾರ್ಜನೆಯಲ್ಲಿ ಅಪ್ರತಿಮ ಸಾಧನೆ ಮಟ್ಟವನ್ನು ಗಣನೀಯವಾಗಿ ಹೆಚ್ಚಿಸುತ್ತದೆ.
* ನಮ್ಮ ದೇಶದ ಬಹುಭಾಷಿಕ ಪರಿಸ್ಥಿತಿಯು ಒಡ್ಡುವ ಸವಾಲುಗಳನ್ನು ಎದುರಿಸಲು ಒಂದು ಪರಿಹಾರವಾಗಿದೆ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

institutes.aglasem.com
aglasem.com

23. a) **ಮೌಖಿಕ ಅಭಿವ್ಯಕ್ತಿಯನ್ನು ಬೆಳೆಸಲು :**

i) ***ಸಂಭಾಷಣೆ :***

* ಒಂದು ವಿಷಯವನ್ನು ನಿಗದಿಪಡಿಸಿ ಅದಕ್ಕೆ ಸಂಬಂಧಪಟ್ಟಂತೆ ಎರಡು ಅಥವಾ ಮೂರು ಪಾತ್ರಗಳನ್ನು ಸಂಭಾಷಣೆ ನಡೆಸಲು ತಿಳಿಸುವುದು.

  ಉದಾ. : ಅಂಗಡಿಯಲ್ಲಿ ತರಕಾರಿ ಕೊಳ್ಳುವವರು, ತಂದೆಯೊಡನೆ ಸ್ವಲ್ಪ ಹಣ ಕೇಳುವುದು. ಮನೆಕೆಲಸ ಸಲ್ಲಿಸಲು ಆಗದಕ್ಕೆ ಕಾರಣ ತಿಳಿಸುವುದು. ಇತ್ಯಾದಿ.

* ಬಹುಭಾಷಾ ತರಗತಿಗಳಲ್ಲಿ ಎರಡು ಬೇರೆ ಬೇರೆ ಮನೆಭಾಷೆಗಳಿರುವ ಮಕ್ಕಳನ್ನು ಜೋಡಿಮಾಡಿ ಸಂಭಾಷಣೆ ನಡೆಸಲು ಹೇಳುವರು.

ii) ***ಚರ್ಚೆ :***

* ಸಾಮಾನ್ಯವಾಗಿ ಚರ್ಚಾ ಸ್ಪರ್ಧೆ ಶಾಲೆಗಳಲ್ಲಿ ನಡೆಸಲಾಗುತ್ತದೆ. ಪ್ರತಿ ವಿಷಯದ ಮೇಲೆ ಪರ ಮತ್ತು ವಿರೋಧ ಗುಂಪುಗಳಿರುತ್ತವೆ.
* ಮೊದಲು ಪರಗುಂಪಿನ ಒಬ್ಬ ವಿದ್ಯಾರ್ಥಿಯು ವಿರೋಧ ಗುಂಪಿನ ಒಬ್ಬ ವಿದ್ಯಾರ್ಥಿ ಚರ್ಚೆ ಮಾಡಲಾಗುತ್ತದೆ.

iii) ***ಗುಂಪು ಚರ್ಚೆ :***

* ಎಲ್ಲರೂ ವೃತ್ತಾಕಾರದಲ್ಲಿ ಕುಳಿತುಕೊಳ್ಳುವುದು. ಒಬ್ಬರಿಗೊಬ್ಬರ ಮುಖ ನೋಡಲು ಸಾಧ್ಯವಾಗಬೇಕು.
* ಒಬ್ಬರು ಮಾತನಾಡುವಾಗ ಮತ್ತೊಬ್ಬರು ಮಾತನಾಡಬಾರದು.
* ಮಾತನಾಡುವಾಗ ಮತ್ತೊಬ್ಬರಿಗೆ ನೋವಾಗದಂತೆ ಎಚ್ಚರಿಕೆವಹಿಸಬೇಕು.
* ಕೊನೆಯಲ್ಲಿ ಎಲ್ಲರೂ ಸೇರಿ ಗುಂಪಿನಲ್ಲಿ ಅಭಿಪ್ರಾಯ ಹಂಚಿಕೊಳ್ಳಬೇಕು.

iv) ***ಭಾಷಣಗಳನ್ನು ಮಾಡುವುದು :***

* ಭಾಷಣದಲ್ಲಿ ವಿಷಯವಸ್ತುವಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು.
* ವಿಷಯ ಮೊದಲು ನಿಗದಿಪಡಿಸಿ ಒಂದು ದಿನವಾದರೂ ಮುಂಚಿತವಾಗಿ ವಿದ್ಯಾರ್ಥಿಗೆ ತಿಳಿಸಬೇಕು.
* ಭಾಷಣ ಮಾಡಿದ ವಿದ್ಯಾರ್ಥಿಗಳಿಗೆ ಮೊದಲು ಸಹಪಾಠಿಗಳಿಂದ ಹಿಮ್ಮಾಯಿತಿ ನೀಡಲಿ.
* ಭಾಷಣದಲ್ಲಿ ಏನನ್ನು ಗಮನಿಸಲಾಗುವುದು ಎಂಬುದನ್ನು ಮೊದಲೇ ತಿಳಿಸಿಬೇಕು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ ಅಂಶಗಳಿದ್ದರೆ $2\frac{1}{2} \times 2 = 5$ ಅಂಕಗಳನ್ನು ನೀಡುವುದು.

ಅಥವಾ

institutes.aglasem.com
aglasem.com

b) i) ***ಶ್ರವಣದೋಷವುಳ್ಳವರು :***

* ಮೊದಲಿಗೆ ಶಿಕ್ಷಕರ ಮಾತು ಸರಿಯಾಗಿ ಕೇಳುವಂತೆ ಕೂರಿಸುವುದು.
* ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಇತರೆ ವಿದ್ಯಾರ್ಥಿಗಳು ಯಾವ ರೀತಿ ಸಹಕಾರ ನೀಡಬೇಕು ಎಂಬುದನ್ನು ಮಾರ್ಗದರ್ಶನ ಮಾಡುವುದು.
* ತೀವ್ರ ಶ್ರವಣದೋಷವಿರುವ ಮಕ್ಕಳಿಗೆ ಆಲಿಸುವ ವಿಷಯವಸ್ತುವನ್ನು ಪರ್ಯಾಯ ಮಾಧ್ಯಮಗಳ ಮೂಲಕ ನೀಡುವುದು.

ii) ***ಕಲಿಕೆಯ ಸಮಸ್ಯೆಗಳುಳ್ಳವರು :***

* ಕಲಿಕಾ ಸಮಸ್ಯೆಗಳನ್ನು ಮಕ್ಕಳಿಗೆ ಶ್ರವಣಾಂಗ ಕೆಲಸ ಮಾಡುತ್ತಿರುತ್ತದೆ.
* ಸಮಸ್ಯಾತ್ಮಕ ವಿದ್ಯಾರ್ಥಿಗಳಿಗೆ ಹೆಚ್ಚುವರಿ ವಿವರಣೆ, ಮಾಹಿತಿ, ಕಲಿಕಾ ಅನುಭವಗಳನ್ನು ನೀಡಲಾಗುವುದು.

ಸೂಚನೆ : ಅಂಶಗಳಲ್ಲದೆ ಸೂಕ್ತವಾದ ಇತರೆ ಅಂಶಗಳಿದ್ದಲ್ಲಿ $2\frac{1}{2} \times 2$ ಒಟ್ಟು 5 ಅಂಕಗಳನ್ನು ನೀಡುವುದು. 5

24. a) ***ತರಗತಿ ಲೈಬ್ರರಿಯ ಉಪಯೋಗಗಳು :***

* ಪುಸ್ತಕ ಓಡನಾಟ ಹೆಚ್ಚಿದಷ್ಟು ಮಕ್ಕಳು ಒಳ್ಳೆಯ ಓದುಗರಾಗುತ್ತಾರೆ.
* ಪ್ರತಿನಿತ್ಯ ಓದುವ ಅವಕಾಶ ಕೊಡುವುದರ ಜೊತೆಗೆ ವೈವಿಧ್ಯಮಯವಾದ ಪುಸ್ತಕಗಳನ್ನು ನೀಡಿ ಸಮಯ ಕೊಟ್ಟರೆ ಓದುಗರಾಗುತ್ತಾರೆ.
* ತರಗತಿ ಲೈಬ್ರರಿ ಸ್ಥಾಪನೆಯಿಂದ ಮಕ್ಕಳಲ್ಲಿ ಕೆಲವು ಪ್ರಶ್ನೆ ಮೂಡಿದಾಗ ಪಕ್ಕನೆ ಅದಕ್ಕೆ ಉತ್ತರ ಕಂಡುಕೊಳ್ಳುವ ಪ್ರಕ್ರಿಯೆ ತರಗತಿಯಲ್ಲಿಯೇ ಪ್ರಾರಂಭವಾಗುತ್ತದೆ.
* ಎಲ್ಲರಿಗೂ ಯಾವಾಗಲೂ ಸಿಗುವಂತಹ ಮತ್ತು ಪರಾಮರ್ಶನಕ್ಕೆ ಸಹಾಯಕಾರಿಯಾಗುವ ಪುಸ್ತಕಗಳು ಹೆಚ್ಚು ಇರಬೇಕು.
* ಪುಸ್ತಕಗಳನ್ನು ಕ್ರಮಬದ್ಧವಾಗಿ ಜೋಡಿಸಿರಬೇಕು.
* ವಿಷಯ ಮತ್ತು ಲೇಖಕರು, ಸಾಹಿತ್ಯ ಪ್ರಕಾರ ಇತ್ಯಾದಿಯಾಗಿ ಪುಸ್ತಕಗಳನ್ನು ವಿಂಗಡಿಸಿರಬೇಕು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

ಅಥವಾ

b) ***ಬರವಣಿಗೆ ಉತ್ತಮಪಡಿಸುವಲ್ಲಿ ನಿಬಂಧ ರಚನೆಯ ಪಾತ್ರ :***

* ಒಂದು ನಿರ್ದಿಷ್ಟ ವಿಷಯದ ಮೇಲೆ ಬರೆಯುವ ಸಂಶೋಧನಾತ್ಮಕ ಬರವಣಿಗೆ ನಿಬಂಧ.
* ಒಂದು ವಿಷಯದ ಮೇಲೆ ವಾದ ಮಂಡಿಸಿ, ವಿಶ್ಲೇಷಿಸಿ ಆ ವಿಷಯದ ಮೇಲೆ ಸ್ಪಷ್ಟ ಗ್ರಹಿಕೆಯನ್ನು ಪ್ರದರ್ಶಿಸುತ್ತದೆ.

institutes.aglasem.com
aglasem.com

* ನಿಬಂಧ ಓದುಗನನ್ನು ಬರವಣಿಗೆಗೆ ಸಿದ್ಧಪಡಿಸಲು ಅವಕಾಶ ದೊರಕಿಸಿ ಕೊಡುತ್ತದೆ.

* ಅಧ್ಯಯನಕ್ಕೆ ತೆಗೆದುಕೊಂಡ ವಿಷಯ, ಅದು ಏಕೆ ಮಹತ್ವ ಎನ್ನುವ ವಿಚಾರ ನಿಬಂಧದಲ್ಲಿ ಪ್ರಸ್ತಾಪಿಸಬೇಕಾಗುತ್ತದೆ.

* ಇನ್ನೊಂದು ಪ್ಯಾರಾದಲ್ಲಿ ಅಧ್ಯಯನ ತಿಳಿಸಬಹುದು.

* ಮಧ್ಯಭಾಗದಲ್ಲಿ ವಿಷಯದ ಮಂಡನೆ ಇರುತ್ತದೆ ಇಲ್ಲಿ ವಿದ್ಯಾರ್ಥಿಯ ಕೆಲಸ ಚಿತ್ರಿತವಾಗುತ್ತದೆ.

* ಶೀರ್ಷಿಕೆ, ಉಪಶೀರ್ಷಿಕೆ ಇತ್ಯಾದಿಗಳು ನಿಬಂಧ ಬರೆಯುವ ಸಂದರ್ಭದಲ್ಲಿ ಬಳಕೆಯಾಗುತ್ತದೆ.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

25. a) ***ವಿದ್ಯಾರ್ಥಿಗಳಲ್ಲಿ ಓದಿನ ಕೌಶಲ ಬೆಳೆಸಲು ಬಳಸುವ ತಂತ್ರಗಳು :***

* ಶಿಕ್ಷಕನಾದವನು ಓದಿನ ತಂತ್ರ ಕಲಿಸಬೇಕಾದರೆ ಕೆಲವೊಂದು ಅಂಶಗಳನ್ನು ಗಮನಿಸಬೇಕಾಗುತ್ತದೆ.

* ಪ್ರತಿಯೊಂದು ವಿದ್ಯಾರ್ಥಿಯನ್ನು ಕರೆಯಿಸಿ ಓದಲು ಹೇಳಬೇಕು.

* ಪ್ರತಿ ಮಗುವಿನ ಓದಿನ ಮಟ್ಟ ತಿಳಿದಾಗ ಮಾತ್ರ ಮಗುವಿಗೆ ತಕ್ಕ ತಂತ್ರಗಳನ್ನು ಬಳಸಬಹುದು.

* ಓದುವ ಸಾಮರ್ಥ್ಯ ಬೆಳೆಸಲು ಪ್ರಾರಂಭದಲ್ಲಿ ಓದುವ ಕಾರ್ಡ್ ಬಳಕೆಗೆ ಹೆಚ್ಚು ಒತ್ತುಕೊಡಬೇಕು.

* ಕಾರ್ಡ್‌ಗಳ ಸೆಟ್‌ಗಳನ್ನು ಬಳಸುವುದರಿಂದ ಮಕ್ಕಳು ಗುಂಪುಗಳಲ್ಲಿ ಕುಳಿತು ಅವರವರ ಮಟ್ಟಕ್ಕೆ ಅನುಗುಣವಾದ ಓದುವ, ಬರೆಯುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

* ಅಕ್ಷರಗಳನ್ನು ಗುರುತಿಸಲು ಬಾರದ ಮಕ್ಕಳಿಗಾಗಿ ಅಕ್ಷರ ಕಾರ್ಡ್ ಕೊಡಬೇಕು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

ಅಥವಾ

institutes.aglasem.com
aglasem.com

b) ***ವಿದ್ಯಾರ್ಥಿಗಳ ಬರವಣಿಗೆ ಸುಧಾರಿಸಲು ಹಮ್ಮಿಕೊಳ್ಳುವ ಚಟುವಟಿಕೆಗಳು :***

* ಬರವಣಿಗೆಯನ್ನು ಸುಧಾರಿಸಲು ಉಕ್ತಲೇಖನ, ಪ್ರಶ್ನೆಗೆ ಉತ್ತರ, ಪ್ರಬಂಧ, ಪತ್ರ ಬರೆಯುವುದು, ನೋಟ್ಸ್ ಮಾಡಿಕೊಳ್ಳಲು ತಿಳಿಸುವುದು ಪ್ರಮುಖವಾಗಿವೆ.
* ಬರವಣಿಗೆಯಲ್ಲಿ ಯೋಜನೆ, ಕರಡು, ಪುನರಾವಲೋಕನ, ಪರಿಷ್ಕರಣೆ, ಮೌಲ್ಯಮಾಪನ, ಪ್ರಕಟಣೆ ಅಡಕವಾಗಿರುವ ಸಾಮರ್ಥ್ಯಗಳಾಗಿವೆ.
* ಮಕ್ಕಳಿಗೆ ಬರವಣಿಗೆ ಕುಂಠಿತವಾದರೆ ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನಾನುಕೂಲವಾಗುತ್ತದೆ.
* ಮೊದಲಿಗೆ ಗುಣಿತಾಕ್ಷರ, ಒತ್ತಕ್ಷರಗಳ ಪರಿಕಲ್ಪನೆ ಮೂಡಿಸಬೇಕು.
* ಕೆಲವು ಪದಗಳಲ್ಲಿ ಕಾಗುಣಿತ ದೋಷ, ಮಾತ್ರ ಇದ್ದರೆ ಅಂತಹ ಪದಗಳನ್ನು ಗೋಡೆಯ ಮೇಲೆ ಹಾಕಿ ಅವರಿಗೆ ಪದೇ ಪದೇ ನೋಡಿ ಚಿತ್ರಣ ಮಾಡಲು ಅನುಕೂಲಿಸಬಹುದು.
* ಮೊದಲಿಗೆ ಜೋಡಕ್ಷರ, ವಾಕ್ಯರಚನೆಯಾಗಿಸುವುದರೊಂದಿಗೆ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬಹುದು.

ಸೂಚನೆ : ಈ ಮೇಲಿನ ಅಥವಾ ಇತರೆ ಯಾವುದೇ ಸೂಕ್ತವಾದ 5 ಅಂಶಗಳಿದ್ದರೆ ಪ್ರತಿ ಅಂಶಕ್ಕೆ 1 ಅಂಕದಂತೆ ಅಂಕ ನೀಡುವುದು. $1 \times 5 = 5$

26. a) i) 4 ಪಾತ್ರಗಳ ರಚನೆಗೆ – 1 ಅಂಕ

ii) ಭಾಷಾ ಶುದ್ಧತೆ ಹಾಗೂ ಲೇಖನ ಚಿಹ್ನೆ – ½ ಅಂಕ

iii) ಸೂಕ್ತ ಶೀರ್ಷಿಕೆಗೆ – ½ ಅಂಕ

iv) ಕೊಟ್ಟಿರುವ ಚಿತ್ರಕ್ಕೆ ಸರಿಹೊಂದುವ ಸಂಭಾಷಣೆ ರಚಿಸಿದರೆ – 3 ಅಂಕಗಳು

ಅಥವಾ

b) i) ಪ್ರಬಂಧದಲ್ಲಿ ಪೀಠಿಕೆ ಬೆಳವಣಿಗೆ ಮುಕ್ತಾಯ ಅನುಸರಿಸಿದರೆ – 1 ಅಂಕ

ii) ಕೊಟ್ಟಿರುವ ವಿಷಯಕ್ಕೆ ಸೂಕ್ತವಾಗಿ ಸಂಘಟಿಸಿದರೆ – 3 ಅಂಕಗಳು

iii) ಭಾಷಾಶುದ್ಧತೆಗೆ, ಲೇಖನಚಿಹ್ನೆ ಬಳಕೆಗೆ – 1 ಅಂಕ

institutes.aglasem.com

aglasem.com